Doc-300
Tipi 2

51st Year of Publication ✱ SATYAVADI Daily, MYSORE 4

Reg No B G 155 ಶ್ರೀ 13-5-1968

ಪ್ರಸರಣ ವರ್ಧನೆಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸತ್ಯವಾದಿ

Space available

For Permanent Advertisement

ಸ್ಥಾಪಕರು : ತಿರುಮಕೂಡಲು ನರಸೀಪುರದ ವಿದ್ವಾನ್ ಎಂ. ವೆಂ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರಸಂಪನ್ನ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹೊಸೂರು ಮೈಸೂರಿಗೆ ಸೇರಬೇಕು

ಮೈಸೂರು ಅಸೋಸಿಯೇಟೆಡ್ ಟಾಕೀಸ್ ಬಳಿ ಹಾಕಿರುವ ತಮ್ಮ ಸ್ವಂತ ಭವ್ಯ ಥಿಯೇಟರಿನಲ್ಲಿ ಪ್ರತಿ ದಿನ ಸಂಜೆ 6-30 ರಿಂದ 12-30 ರ ವರೆಗೆ

ವಿವಿಧ ವಿನೋದ Pastime & sports

ಸುಪ್ರಸಿದ್ಧ ನರ್ತಕಿಯರಿಂದ ವಿವಿಧ ತರದನೃತ್ಯಗಳು, ಹೈದರಾಬಾದಿನ ಸುಪ್ರಸಿದ್ಧ ಜಾದುಗಾರ ಶ್ರೀ ಎಲ್. ಎ. ಬಾಬು ಇವರಿಂದ ಅದ್ಭುತಮಯವಾದ ಇಂದ್ರಜಾಲಾಟ
ನರೆಯುವ ಮಾತನಾಡುವ ಬೊಂಬೆ, ಎಲೆಕ್ಟ್ರಿಕ್ ಕುರ್ಚಿ. ಪ್ರವೇಶದರ 25 ಪೈಸೆ

"ಸತ್ಯವಾದಿ" ಯ ಸ್ವರ್ಣೋತ್ಸವ

"ಸತ್ಯವಾದಿ"ಯ ಸ್ವರ್ಣೋತ್ಸವಪತ್ರಿಕೆಯನ್ನು ಪ್ರಪ್ರಥಮದಲ್ಲಿಯೇ ನೆರೆವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮಂತ್ರಿವರ್ಗಾದ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರ್ಕು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆಯೇ ಇಲ್ಲ.

ಸ್ವರ್ಣೋತ್ಸವವು ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಅಭಿಮಾನಿಗಳಿಂದ ಸೂಡಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವಂತೆ ಆಶಿಸಿ, ಕೃತಜ್ಞತಾಪೂರ್ವಂದಿಸುತ್ತೇನೆ.

ಸಂಪಾದಕ 'ಸತ್ಯವಾದಿ'
ಚಾಮರಾಜಪುರಂ, ಮೈಸೂರು 4.

ಹಿಂದೂ ನ್ಯಾಯ

ದಕ್ಷಿಣ ಭಾರತದ ತಿರುವರೂರಿನಲ್ಲಿರುವ ನ್ಯಾಯಚಕ್ರದ ಬಗ್ಗೆ ಒಂದು ಕತೆ ಇದೆ. ಇದರಿಂದ ಪುರಾತನ ಹಿಂದೂಗಳು ಧರ್ಮ ಅಂದರೆ ನ್ಯಾಯದ ಬಗ್ಗೆ ಎಂತಹ ಉನ್ನತ ಅಭಿಪ್ರಾಯ ಹೊಂದಿದ್ದರೆಂಬುದು ವ್ಯಕ್ತವಾಗುತ್ತದೆ.

ಮನುಸತಿ ಚೋಳನ ರಾಜ್ಯಭಾರ ಕಾಲದಲ್ಲಿ 'ಆರೈಕಮಣಿ—ತಿಳುವಳಿಕೆ ಘಂಟೆ" ಅರಮನೆಯಲ್ಲಿ ತಗಲುಹಾಕಲಾಗಿತ್ತು. ರಾಜನನ್ನು ಕಾಣಬೇಕಾದವರು ಆ ಘಂಟೆ ಬಾರಿಸಿ, ರಾಜೂರ್ಜನ ಪಡೆದು ತಮ್ಮ ಕೂರನ್ನು ತಿಳಿಸಬಹುದಿತ್ತು. ಅವರ ಸಂಕಟ ಪರಿಹರಿಸುತ್ತಿದ್ದನು.

ಒಂದು ದಿನ, ರಾಜ್ಯದ ಉತ್ತರಾಧಿಕಾರಿಯಾದ ರಾಜನ ಪುತ್ರನು ತನ್ನ ರಥದಲ್ಲಿ ಹೋಗುತ್ತಿದ್ದಾಗ ಆದು ಒಂದು ಕರುವಿನ ಮೇಲೆ ಹರಿದು ಆದು ಸತ್ತಿತು. ಇದನ್ನು ಕಂಡ ಕರುವಿನ ತಾಯಿಯು ತಿಳುವಳಿಕೆ ಘಂಟೆ ಹತ್ತಿರ ಹೋಗಿ ಅದನ್ನು ಬಾರಿಸಿತು

ರಾಜನು ಎಲ್ಲ ವಿಷಯವನ್ನೂ ಅರಿತು, ಕರು ಸತ್ತ ಸ್ಥಳದಲ್ಲಿ ತನ್ನ ಮಗನು ಕೊಲ್ಲಲ್ಪಡಬೇಕೆಂದು ಆಜ್ಞೆ ಮಾಡಿದನು. ತನ್ನ ಆಜ್ಞೆಯನ್ನು ನೆರವೇರಿಸದಿರುವುದನ್ನು ಕಂಡು, ತಾನೇ ಆ ಸ್ಥಳದಲ್ಲಿ ತನ್ನ ರಥವನ್ನು ಮಗನ ಮೇಲೆ ಬಿಟ್ಟು ಅವನನ್ನು ಕೊಂದನು.

ತೊಡೆ ಮೇಲೆ ಉತ್ತರದ ಬರವಣಿಗೆ

ತೆಹರ್ಾ— ಅಬೆಡಾನಿನಲ್ಲಿ ತುಂಡ್ಯಲಂಗ ಧರಿಸಿ ತೊಡಯ ಮೇಲೆ ಗಣಿತ ವಿಚಾರಗಳನ್ನು ಬರೆದುಕೊಂಡು ಬಂದು ಪರೀಕ್ಷೆಗೆ ಕೂತಿದ್ದ 17 ವರ್ಷದ ಹುಡುಗಿಯು ಹೊರದೂಡಲ್ಪಟ್ಟಳು.

●

ಪತ್ರಿಕೋದ್ಯೋಗಿಗಳಿಗೆ ಸನ್ಮಾನ

ಮೈಸೂರು— ನಗರದ ಪತ್ರಿಕೋದ್ಯೋಗಿಗಳಿಗೆ ಶ್ರೀ ಕೆ ಪಿ ಜಂಬೂಗೌಡರ ವ್ಯವಸ್ಥಾಪಕತ್ವದಲ್ಲಿ ಸಿನ್ಹೆ ಸತ್ಕಾರ ಸನ್ಮಾನ ನಡೆಸಲಾಯಿತು.

★

ಅತಿ ಹೆಚ್ಚು ವಿಮಾನ ಸಂಚಾರ

ಪ್ಯಾರಿಸ್ಸು 1967 ರಲ್ಲಿ ಯುರೋಪಿನ ವಿಮಾನ ಸಂಚಾರದ ಅತ್ಯಂತ ಚಟುವಟಿಕೆ ಸ್ಥಳವಾಗಿತ್ತು — ಒಟ್ಟು 884917 ಪ್ರಯಾಣೀಕರು ಇಲ್ಲಿನ ಅಂತರಾಷ್ಟ್ರೀಯ ವಿಮಾನನಿಲ್ದಾಣ ಉಪಯೋಗಿಸಿದರು

ಈ ಕಟ್ಟುನಿಟ್ಟಿನ ನ್ಯಾಯ ದೊರಕಿಸಿದ್ದನ್ನು ಕಂಡ ಶ್ರೀ ಮಹಾದೇವ ಮತ್ತು ಪಾರ್ವತಿದೇವಿಯರು ಮೆಚ್ಚಿ, ಆ ಸ್ಥಳದಲ್ಲಿ ಕಾಣಿಸಿಕೊಂಡು, ರಾಜನ ಮಗನನ್ನೂ ಕರುವನ್ನೂ ಬದುಕಿಸಿದರು, ರಾಜನನ್ನು ಪ್ರಶಂಸಿಸಿದರು. ಹಿಂದೂ ಧರ್ಮ ಪಾಲನೆ ಹೀಗಿತ್ತು.

ನ್ಯೂ ಬ್ರಿಟೆನರು ಬರುವ ಮುನ್ನಾ ಭಾರತದಲ್ಲಿ ನ್ಯಾಯವಿರಲಿಲ್ಲವೆಂಬ ವಿಲಕ್ಷಣ ವಾದವನ್ನು ಒಪ್ಪುವ ಕುರಿಯಂತಹ ಹಿಂದೂಗಳಿಗೇನನ್ನಬೇಕು ; ಆದರೆ ಮೂಢರಾದ ಮಾನ್ಯರವರನ್ನು. ಈ ರೀತಿ ಧೈರ್ಯದಿಂದ ಸುಳ್ಳನ್ನು ಪರೇಸಸೇ ಜೇಬ್ಗಿ, ಮೋಸ ಸಿಗೊಳಿಸುವುದು ಸುಲಭವಾಗಿದೆ (ಟ್ರೂತ್)

★

ಹೊಸೂರಿನಲ್ಲಿ ಕನ್ನಡ ಚಳವಳಿಗಾರರು

ಬೆಂಗಳೂರು— ಇಲ್ಲಿಗೆ 20 ಮೈಲಿ ದೂರದಲ್ಲಿ ಮದರಾಸು ರಾಜ್ಯದಲ್ಲಿರುವ ಕನ್ನಡ ಮಾತನಾಡುವ ಭಾಗವಾದ ಹೊಸೂರು, ಮೈಸೂರಿಗೆ ಸೇರಬೇಕೆಂದು, 60 ಮಂದಿ ಕನ್ನಡ ಚಳವಳಿಗಾರರು ಭಾನುವಾರ ಅಲ್ಲಿಗೆ ಹೋಗಿ ಸತ್ಯಾಗ್ರಹ ನಡೆಸಿದರು — ಇವರಿಗೆ ಆದರ ಸ್ವಾಗತ ದೊರೆತು ಊರಿನಲ್ಲಿ ವೈಭವವಾಗಿ ಮೆರವಣಿಗೆ ನಡೆಸಲಾಯಿತು.

★

ಭಾರತದ ಸಾಮರ್ಥ್ಯ

ಹವಹೆಹಲಿ— 1970 ರ ಹೊತ್ತಿಗೆ ಭಾರತವು ವಾರಕ್ಕೊಂದು ಆಟಂಬಾಂಬ್ ತಯಾರಿಸಬಲ್ಲದಾಗಿದೆ ಎಂದು 'ಸೈನ್ಸ್" ಪತ್ರಿಕೆ ಪ್ರಕಟಿಸಿದೆ — 1970 ರ ಪ್ರಾರಂಭದ ಹೊತ್ತಿಗೆ 300 ಮೈಲಿ ಎತ್ತರ ಹಾರಬಲ್ಲ ರಾಕೆಟ್ ತಯಾರಿಸಬಲ್ಲದೆಂದೂ ಪ್ರಕಟಿಸಿದೆ — ಭಾರತವು ಪರಮಾಣು ಮಾರ್ಗ ಹಿಡಿಯಬೇಕೆಂದುಕೆಲ್ಲಂಡರೆ, 1972 ರ ಹೊತ್ತಿಗೆ ಹಿರೋಶಿಮಾ ಮಾದರಿಯ 230 ಬಾಂಬುಗಳಿಗೆ ಅವಶ್ಯವಾದಷ್ಟು ಪ್ಲುಟೋನಿಯಂ ಉತ್ಪಾದಿಸಬಲ್ಲಹೆಂದೂ ಪ್ರಕಟಿಸಿದೆ.

★

ಬಳಿಗಿರಿರಂಗನ ಬೆಟ್ಟದಲ್ಲಿ 140000 ರೂ.ಗಳ ಖರ್ಚಿನಿಂದ ನಲ್ಲೀನೀರು ದೊರೆಯುವಂತೆ ಮಾಡಲಾಗಿದೆ.

★

ಗುಲ್ಬರ್ಗ— ಇಲ್ಲಿಯ ಎಸ್ಸೆಸ್ಪಿ ಶಾಜೆ ತಾ॥ 22 ರಿಂದ ಸಾಮೂಹಿಕ ಶಾಸನೋಲ್ಲಂಘನ ಜಳವಳ ಹೂಡಲಿರುವರು

★

ಪಾಟ್ನಾ— ಮುಸಾರಹಿ ಗ್ರಾಮದಲ್ಲಿ ದ್ವಾರಪೂಜೆ ನಡೆಸಲಾಗುತ್ತಿದ್ದಾಗ ಗುಂಪಿಯ ಬಾಲ್ತನಿ ಕುಸಿದು 12 ಮಂದಿ ಸತ್ತು 29 ಮಂದಿ ಗಾಯಗೊಂಡರು

ಚಳವಳಿ

ಮೈಸೂರು— ಎಸ್ಸೆಸ್ಪಿ ಸ್ಥಳೀಯ ಶಾಖೆಯು ತಾ॥ 15 ರಿಂದ ಪ್ರಾರಂಭಿಸಲಿರುವ ಸಹಕಾರಾಟದ ಸ್ವರೂಪವು ಹೇಗ್ಗೆ ಯಾಗಿರುವುದೆಂದು ತಾ॥ 15 ರಂದು ಟೌನ್‌ಹಾಲಿನಿಂದ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಮತ್ತು ಪೊಲೀಸ್ ಅಧಿಕಾರಿಗಳ ಕಚೇರಿಗಳಿಗೆ ಹೋಗಿ ತಮ್ಮ ಚಳವಳಿಕೆಪ್ರಣಾಳಿಕೆಗಳನ್ನು ಸಲ್ಲಿಸಲಿರುವರು

ಲೈಂಗಿಕ ಬ್ರಿಟನ್

ರಾಜಕುಮಾರ ಚಲ್ರ್ಸ್ ಓದುತ್ತಿರುವ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ವಿವಾಹಕ್ಕೆ ಮುಂಚೆ ಸಂಭೋಗದ ಪರ ಮತನೀಡಿದರು. ಅಲ್ಲಿ ಈ ಬಗ್ಗೆ ವಿದ್ಯಾರ್ಥಿಗಳ ಪತ್ರಿಕೆ ' ವರ್ಸಿಟಿ ' ನಡೆಸಿದ ಅಭಿಪ್ರಾಯ ಮತಸಂಗ್ರಹದಲ್ಲಿ ಅಲ್ಲಿಯ 8000 ವಿದ್ಯಾರ್ಥಿಗಳಲ್ಲಿ ಶೇಕಡ 86 ಮಂದಿಯು, ಮದುವೆಗೆ ಮುಂಚೆ ಲೈಂಗಿಕ ಕಾರ್ಯವು ಸದಾ ತಪ್ಪಲ್ಲವೆಂದಿರುವರು. ಈ ಲೆಕ್ಕದಲ್ಲಿ ಶೇಕಡ 43 ವಿದ್ಯಾರ್ಥಿಗಳೂ, ಮತ್ತು ಅಲ್ಲಿರುವ 800 ವಿದ್ಯಾರ್ಥಿನಿಯರಲ್ಲಿ ಮೂರನೇ ಒಂದು ಭಾಗ ದಷ್ಟಿನವರೂ ಲೈಂಗಿಕಸುಖ ಅನುಭವಿಸಿರುವುದು.

ಅನೀತಿಯ ಪರಮಾವಧಿ ! [ಟ್ರೂತ್]

★

ವಿಧವೆ ಮತ್ತು ವಿಧುರರ ವಿವಾಹಗಳ

ಕಳೆದ ವರ್ಷ ಜರ್ಮನಿಯಲ್ಲಿ ನಡೆದ ಮದುವೆಗಳಲ್ಲಿ ಶೇಕಡ 60 ವಿಧವೆಯರು ಮಾಡಿಕೊಂಡಿದ್ದು, ಶೇಕಡ 29 ವಿಧುರರದ್ದು ! ಜೋಡಿಯಿಲ್ಲದ ಜೀವನ ಒಂಟಿ ಜೋಡಿನಷ್ಟೇ ದಿಸ್ಪ್ರಯೋಜಕ ಅಂತ ಅವರ ಭಾವನೆ ! (ಯೂ ಪಿ ಎಸ್)

★

ಯೂರೋಪಿನಲ್ಲಿ ಒಂದೇ ರೀತಿ

ಕೊಪೆನ್‌ಹೇಗ್ (ಡಾಡ್)— ಇಡೀ ಯೂರೋಪಿಗೆ ಅನ್ವಯವಾಗುವಂಥ ಒಂದೇ ರೀತಿಯ ನಾಣ್ಯ ಚಲಾವಣೆಗೆ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ತೀರ್ಮಾನವು ಯೂರೋಪಿಯನ್ ಯೂನಿಯನ್ನಿನಲ್ಲಿ ಅಂಗೀಕೃತವಾಯಿತು. (ಯೂ ಪಿ ಎಸ್)

Cow Slaughter should be banned Immediately

SHAKTI SUDHA

A Superb Tonic

Protect the Cow

ಗೋರಕ್ಷಣೆ ಮತ್ತು ಪಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ
ಶ್ರೀದ್ವಾರಕಾ ಜಗದ್ಗುರು ಮಹಾಸನ್ನಿಧಿಗಳವರು ಶ್ರೀ ಶೃಂಗೇರಿ ಜಗದ್ಗುರು
ಮಹಾಸನ್ನಿಧಿಯವರಿಗೆ ಉಚಿತ ಅಕ್ಕರೆಯ ಕೃತಜ್ಞತಾಪೂರ್ವಕ
ಕರ್ನಾಟಕದಲ್ಲಿ ಗೋರಕ್ಷಣೆ ಪಾಠಶಾಲೆಯೊ, ಕಾಲೇಜೊಂದೂ, ಪುಸ್ತಕವೂ
ಎಷ್ಟೆಷ್ಟೋ ವಿಧಗಳ ಪ್ರಚಾರ ಮಾಡಬೇಕಿದೆ ! ಆರಂಭಕ್ಕೆ ಇಂದು 50 ಸಾವಿರ

Quality Printing — Neat Binding

Lakshminarasimha Press

Sivarampet, Mysore

ವುಡ್‌ಲಾಂಡ್ಸ್ ಜನವರಿ 2 ನೇ ವಾರ

.... ಸುಬೋಧ್ ಮುಖರ್ಜಿಯವರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ ....

ಷಾಗಿರ್ದ್ Shagird

ತಾರಾಗಣ— ಜಾಯ್ ಮುಖರ್ಜಿ, ಸೈರಾಬಾನು, ನಾಜಿರ್ ಹುಸೇನ್
ಅಚ್ಚಲ ಸಹದೇವ್, ಐ. ಎಸ್. ಜೋಹರ್ [ದಿನ 3 ಪ್ರದರ್ಶನ]

ಆಪೇರ— 10—5—68 ರಿಂದ

.... ಅಪೂರ್ವ ಕನ್ನಡ ಚಿತ್ರ ....

ಬೆಂಗಳೂರು ಮೈಲ್

ಪಾತ್ರ: ರಾಜಕುಮಾರ್ ನರಸಿಂಹರಾಜು ಕೊಟ್ಟಾರಕರ್
ಅಶ್ವಥ್ ಜಯಂತಿ ವಿಜಯಲಲಿತ

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

— ಗೋರಕ್ಷಣಾ ವ್ಯವಸ್ಥಾಪಕರ ವಿನಂತಿ —

ಗೋರಕ್ಷಣೆಗೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ
ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ಚಂದಾವಾಯಿದೆ ಕಳೆದಿರುವವರು ಇವಂಲ್ಲಿ ಚಂದಾ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ಶಾಂತಾಯಿನ್, ಶ್ರೀ ಪಿಎಸ ವಿಶ್ವನಾಥ್ ಜಪಿನಗರ, ಬೆಂಗಳೂರು
ಶ್ರೀ ಬಿ ಜಿ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರ, ಮೈಸೂರು
ಶ್ರೀ ಅನಂತಸಂಸಿಂಹಮ್ಯಂಗಾರ್, ಶಾಸ್ತ್ರಧರ್ಮಪ್ರಚಾರಸಭಾ,ಹೊಂಗನೂರು ಂ
ಗೋರಕ್ಷಣ ಆಫೀಸು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ— ಗೋರಕ್ಷಣ ಆಫೀಸು 1067 ಚಾಮರಾಜಪುರಂ, ಮೈಸೂರು

Golden Jubilee of 'Satyavadi'

The golden jubilee of the ' Satyavadi ' is to be celebrated very soon.

The President, the Prime Minister, H H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, ' Satyavadi ' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4